ದಿನಾಂಕ : 20-09-2021. ಓ ಎಸ್ ನಂ. 12/2019

ಪಿ. ಡಬ್ಲ್ಯೂ - 1

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ

ಈ ಮೊದಲು ಸೇಫ್ ಕಸ್ಟಡಿಯಲ್ಲಿ ದಾಖಲೆಯನ್ನು ಇಡಲಾಗಿತ್ತು. ಸದರಿ ದಾಖಲೆಯನ್ನು ಕಿತ್ತೂರ ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಿಂದ ಕವರನಲ್ಲಿ ಬಂದಿರುತ್ತದೆ. ಅದನ್ನು ತೆರೆದ ನ್ಯಾಯಾಲಯದಲ್ಲಿ ತೆಗೆದು ನೋಡಲಾಯಿತು. ಸಾಕ್ಷಿಯು ಸದರಿ ದಾಖಲೆಯನ್ನು ಗುರುತಿಸಿರುವರು. ಸದರಿ ದಾಖಲೆಯು ಅಧಿಕಾರ ಪತ್ರದ ಮೂಲ ಪ್ರತಿಯಾಗಿದ್ದು ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಪುಟ ಸಂ 4 ರಲ್ಲಿ 1 ನೇ ವಾದಿಯ ಫೋಟೊ ಇರುವುದು. ಅದರ ಬದಿಯಲ್ಲಿರುವ ಹೆಬ್ಬೆಟ್ಟಿನ ಗುರುತು ಕೂಡ 1 ನೇ ವಾದಿಯದ್ದಾಗಿರುತ್ತದೆ. ಪುಟ ಸಂ 5 ರಲ್ಲಿ ಕೆಂಪು ಸೀರೆಯಲ್ಲಿ ಕಂಡುಬರುವ ವ್ಯಕ್ತಿಯ ಫೋಟೊ ನನ್ನ ಅಕ್ಕನಾದ 3 ನೇ ವಾದಿಯದ್ದಾಗಿರುವದು. ಅದರ ಪಕ್ಕದಲ್ಲಿರುವ ಫೋಟೊ 2 ನೇ ವಾದಿಯದ್ದಾಗಿರುವದು. ಅದರ ಕೆಳಗಡೆ ನೀಲಿ ಬಣ್ಣದ ಅಂಗಿಯಲ್ಲಿ ಇರುವ ವ್ಯಕ್ತಿಯ ಫೋಟೊ 5 ನೇ ವಾದಿಯದ್ದಾಗಿರುವದು. ಅದರ ಪಕ್ಕದಲ್ಲಿರುವ ಫೋಟೊ 4 ನೇ ವಾದಿಯದ್ದಾಗಿರುವದು. ಪುಟ ಸಂ. 5 ರಲ್ಲಿ ಜಿ.ಪಿ.ಎ. ಹೋಲ್ಡರ್ ಎಂದು ನಾನು ಸಹಿ ಮಾಡಿದ್ದೇನೆ. ಸಾಕ್ಷಿಯು ಸದರಿ ಸಹಿಯನ್ನು ಗುರುತಿಸಿದ ಕಾರಣ ಅದನ್ನು ನಿಡಿ 1 ಎ ಎಂದು ಗುರುತಿಸಲಾಯಿತು. ಪುಟ ಸಂ. 5 ರಲ್ಲಿ 3, 4 ಮತ್ತು 5 ರವರು ಸಹಿ ಮಾಡಿರುವರು. ಅದೇ ರೀತಿ 2 ನೇ ವಾದಿ ಹೆಬ್ಬೆಟ್ಟಿನ ಸಹಿಯನ್ನು ಹಾಕಿರುವರು. ಸದರಿ ದಾಖಲೆಗೆ ಸಾಕ್ಷಿದಾರರಾಗಿ ಸಂಗನಗೌಡ ಪಾಟೀಲ ಸಹಿ ಮಾಡಿರುವರು. ಸಾಕ್ಷಿಯು ಸದರಿ ಸಹಿಯನ್ನು ಗುರುತಿಸಿದ್ದು ಅದನ್ನು ನಿಡಿ 1 ಬಿ ಎಂದು ಗುರುತಿಸಲಾಯಿತು. ಚಿದಂಬರ ಆರ್. ನಾಯಕ, ವಕೀಲರು ಸದರಿ ಸಾಕ್ಷಿದಾರರನ್ನು ಗುರುತಿಸಿ ಸಹಿ ಮಾಡಿರುವರು. ಸ.ನಂ. 54 ರ ಎರಡು ಉತಾರಗಳನ್ನು ಹಾಜರುಪಡಿಸಿದ್ದು ಅದನ್ನು ನಿಡಿ 2 ಎಂದು ಗುರುತಿಸಲಾಯಿತು. ಸದರಿ ದಾಖಲೆಯು ಎರಡು ಪುಟಗಳನ್ನು ಒಳಗೊಂಡಿರುವದು. ಮ್ಯುಟೇಶನ ದಾಖಲೆಯನ್ನು ಹಾಜರುಪಡಿಸಲಾಗಿದ್ದು ಅದನ್ನು ನಿಡಿ 3 ಎಂದು ಗುರುತಿಸಲಾಯಿತು.

<u>ಮುಂದುರೆದ ಮುಖ್ಯ ವಿಚಾರಣೆಃ</u> ಸಮಯ ಕೋರಿದ ಕಾರಣ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಪ್ರ.ದಿ.ನ್ಯಾ ಮತ್ತು ಪ್ರ.ದ.ನ್ಯಾದಂ.ನ್ಯಾಬೈಲಹೊಂಗಲ